NOVEMBER 17, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಕಲಬುರಗಿ ಜಿಲ್ಲೆಯ, ಮೂರು ಮಹತ್ವಾಕಾಂಕ್ಷಿ ತಾಲೂಕುಗಳಲ್ಲಿ, ಪರಿಣಾಮಕಾರಿ ಯೋಜನಾನು ಷ್ಠಾನ; ಕೇಂದ್ರ ನೀತಿ ಆಯೋಗದಿಂದ, ಮೆಚ್ಚುಗೆ.**
- **ವಿಧಾನ ಮಂಡಲ ಚಳಿಗಾಲದ ಅಧಿವೇಶನ; ರಾಜ್ಯದ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಲು, ವಿಪಕ್ಷ ಬಿಜೆಪಿ ಸಿದ್ಧತೆ.**
- **ಕರಾವಳಿ ಗೋಡಂಬಿ ಉದ್ಯಮದ ಬಲವರ್ಧನೆಗೆ, ಹೊಸ ನೀತಿ; ಸರ್ಕಾರದೊಂದಿಗೆ ಚರ್ಚೆ, ವಿಧಾನಸಭಾಧ್ಯಕ್ಷರ, ಹೇಳಿಕೆ.**
- **2030ರ ವೇಳೆಗೆ, ನಾಯಿ ಕಡಿತದ ಸಾವುಗಳನ್ನು ಶೂನ್ಯಕ್ಕೆ ತರಲು, ಆರೋಗ್ಯ ಇಲಾಖೆ, ಸಂಕಲ್ಪ.**

<><><>

**ಈಗ ವಾರ್ತೆಗಳ ವಿವರ**

<><><>

**ಕೇಂದ್ರ ನೀತಿ ಆಯೋಗ, ಕಲಬುರಗಿ ಜಿಲ್ಲೆಯ, ಅಫಜಲಪೂರ, ಶಹಾಬಾದ ಹಾಗೂ ಕಾಳಗಿಯನ್ನು ಮಹತ್ವಾಕಾಂಕ್ಷಿ ತಾಲೂಕುಗಳಾಗಿ ಗುರುತಿಸಿದೆ. ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್, ಈ ತಾಲೂಕುಗಳ ಸುಸ್ಥಿರ ಪ್ರಗತಿಗಾಗಿ, ಹೊಸ ಆಡಳಿತ ಮತ್ತು ಅಭಿವೃದ್ಧಿ ಯೋಜನೆ ಜಾರಿಗೊಳಿಸಿದ್ದಕ್ಕಾಗಿ, ನೀತಿ ಆಯೋಗದ ಸಿ.ಇ.ಓ. ಪ್ರಶಂಸಾ ಪತ್ರ ನೀಡಿ, ಅವರನ್ನು ಅಭಿನಂದಿಸಿದ್ದಾರೆ. ‘ರಾಜ್ಯಗಳಿಗೆ ನೀತಿ; ರಾಜ್ಯ ಬೆಂಬಲಿತ ಮಿ ’ನ್’ ಧ್ಯೇಯದಡಿ, ಸಮಗ್ರ ಶಿಕ್ಷಾ ಅಭಿಯಾನ ಹಾಗೂ ಮಣ್ಣಿನ ಆರೋಗ್ಯದ ಮರುಸ್ಥಾಪನೆ, ಈ ಎರಡು ವಲಯಗಳಲ್ಲಿ, ಕಲಬುರಗಿ ಜಿಲ್ಲೆಯ ಮೂರು ತಾಲೂಕುಗಳಲ್ಲಿ, ಅಸಾಧಾರಣ ಅನು ಷ್ಠಾನ ಹಾಗೂ ಉತ್ತಮ ಅಭ್ಯಾಸಗಳನ್ನು ಗುರುತಿಸಿ, ನೀತಿ ಆಯೋಗ, ಮೆಚ್ಚುಗೆ ವ್ಯಕ್ತಪಡಿಸಿದೆ.**

<><><>

**ಈ ಕುರಿತು ಒಂದು ವರದಿ..**

<><><>

*2024ರ ಆಗಸ್ಟ್ ನಲ್ಲಿ, ಕೇಂದ್ರ ನೀತಿ ಆಯೋಗ ಪ್ರಕಟಿಸಿದ, ಡೆಲ್ಟಾ ರ್‍ಯಾಂಕ್ ಪಟ್ಟಿಯಲ್ಲಿ, ದಕ್ಷಿಣ ಭಾರತ ವಲಯದಡಿ, ಕಲಬುರಗಿ ಜಿಲ್ಲೆಯ ಕಾಳಗಿ ತಾಲೂಕಿಗೆ, ಎರಡನೇ ರ್‍ಯಾಂಕ್ ದೊರಕಿತ್ತು. ಆಯೋಗ, ನಗದು ಪುರಸ್ಕಾರವಾಗಿ ನೀಡಿದ, ಒಂದು ಕೋಟಿ ರೂಪಾಯಿ ಅನುದಾನದಲ್ಲಿ, ಅಂಗನವಾಡಿಗಳ ಮೂಲಸೌಕರ್ಯ ಅಭಿವೃದ್ಧಿ ಹಾಗೂ ನಲಿಕೆಯೊಂದಿಗೆ ಕಲಿಕೆ ಖಾತ್ರಿ ಪಡಿಸಲು, ಶಿಶು ಶಿಕ್ಷಣಕ್ಕೆ ಆದ್ಯತೆ ನೀಡಿ ಕಲಬುರಗಿ ಜಿಲ್ಲಾ ಪಂಚಾಯಿತಿಕ್ರಿಯಾ ಯೋಜನೆ ರೂಪಿಸಿದೆ. ಕಲಬುರಗಿ ನಗರದ, ಸುಸಜ್ಜಿತ ಮಣ್ಣು ಪರೀಕ್ಷೆ ಪ್ರಯೋಗಾಲಯದಲ್ಲಿ, ನಿಖರ ವರದಿ ಹಾಗೂ ಮಣ್ಣು ಆರೋಗ್ಯ ಕಾರ್ಡ್ ವಿತರಿಸಿ, ಕೃಷಿ ಇಲಾಖೆಯಿಂದ, ರೈತರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ. ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್, ನೀತಿ ಆಯೋಗದ ಶ್ಲಾಘನೆಯನ್ನು, ತಮ್ಮ ತಂಡಕ್ಕೆ ಸಮರ್ಪಿಸಿದ್ದು, ಈ ಶ್ರೇಯ ಪಡೆಯಲು, ಕೈಗೊಂಡ ಕ್ರಮಗಳ ಬಗ್ಗೆ, ಮಾಹಿತಿ ನೀಡಿದ್ದಾರೆ.*

<><><>

ವಿವೇಕ (48) + ಫೌಜಿಯಾ ತರನ್ನುಮ್ ಧ್ವನಿ (64) ಸೆಕೆಂದುಗಳು

<><><>

ಬೆಳಗಾವಿಯ, ವಿಧಾನ ಮಂಡಲದ ಚಳಿಗಾಲದ ಅಧಿವೇಶನದಲ್ಲಿ, ರಾಜ್ಯದ ಜನತೆಯ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಲು, ಬಿಜೆಪಿ ಸಿದ್ಧವಾಗಿದೆ ಎಂದು, ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ ತಿಳಿಸಿದ್ದಾರೆ. ಚಾಮರಾಜನಗರದಲ್ಲಿ, ಧರ್ತಿ ಆಬಾ, ಭಗವಾನ್ ಬಿರ್ಸಾ ಮುಂಡಾ ಅವರ, 150ನೇ ಜಯಂತ್ಯುತ್ಸವವನ್ನು, ವನವಾಸಿ ಸೋಲಿಗ ಬಂಧುಗಳೊಂದಿಗೆ ಆಚರಿಸಿ, ಅವರು ಮಾತನಾಡಿದರು. ಬೆಳೆ ಹಾನಿಗೊಳಗಾದ ರೈತರಿಗೆ, ಸಕಾಲಿಕ ಪರಿಹಾರ ಒದಗಿಸಿಲ್ಲ. ರಾಜ್ಯದ ರೈತರು ಸಂಕಷ್ಟದಲ್ಲಿದ್ದಾರೆ. ಕಾನೂನು, ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಎಂದು, ಆರ್. ಅಶೋಕ ಆರೋಪಿಸಿದರು.

<><><>

ಗೋಡಂಬಿ ಉದ್ಯಮಕ್ಕೆ, ಬಲ ತುಂಬಲು, ಹೊಸ ನೀತಿ ರೂಪಿಸಲು, ಮುಖ್ಯಮಂತ್ರಿಯವರೊಂದಿಗೆ ಚರ್ಚಿಸುವುದಾಗಿ, ವಿಧಾನಸಭಾಧ್ಯಕ್ಷ, ಯು.ಟಿ.ಖಾದರ್, ತಿಳಿಸಿದ್ದಾರೆ. ಕರ್ನಾಟಕ, ಗೋಡಂಬಿ ತಯಾರಕರ ಸಂಘದ ನೇತೃತ್ವದಲ್ಲಿ, ಮಂಗಳೂರಿನಲ್ಲಿ ನಡೆದ, ಕಾಜು ಶತಮಾನೋತ್ಸವ ಸಮ್ಮೇಳನದ, ಸಮಾರೋಪದಲ್ಲಿ ಅವರು, ಮಾತನಾಡಿದರು. ಕಂದಾಯ, ಅರಣ್ಯ ಮತ್ತು ಕೃಷಿ ಇಲಾಖೆ ಸಚಿವರೊಂದಿಗೆ ಸಭೆ ನಡೆಸಿ, ಕರಾವಳಿಯಲ್ಲಿ ಕ್ಷೀಣಿಸುತ್ತಿರುವ, ಗೋಡಂಬಿ ಉದ್ಯಮವನ್ನು ಬಲಪಡಿಸಲು, ಮುಂದಿನ ಬಜೆಟ್‌ನಲ್ಲಿ ಹಣ ಮೀಸಲಿಡುವಂತೆ, ಕೋರುವುದಾಗಿ ತಿಳಿಸಿದರು. ಶಾಸಕ ಡಿ. ವೇದವ್ಯಾಸ ಕಾಮತ ಮಾತನಾಡಿ, ಗೇರು ಅಭಿವೃದ್ಧಿ ನಿಗಮದ ಮೂಲಕ, ರಾಜ್ಯದೆಲ್ಲೆಡೆ ಗೇರು ಗಿಡಗಳನ್ನು ಬೆಳೆಸಲು, ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(56 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

2030ರ ವೇಳೆಗೆ, ನಾಯಿ ಕಡಿತದ ಸಾವುಗಳನ್ನು ಶೂನ್ಯಕ್ಕೆ ತರುವ, ಮತ್ತು ಸಾವುಗಳಾಗದಂತೆ ತಡೆಯಲು, ಔ ’ಧಿ ಕಂಡುಕೊಳ್ಳುವ ಉದ್ದೇಶ ಹೊಂದಲಾಗಿದೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ ತಿಳಿಸಿದ್ದಾರೆ. ವಿಷಕಾರಿ ಹಾವು ಕಡಿತದಿಂದ ಸಂಭವಿಸುವ ಸಾವಿನ ಪ್ರಮಾಣ ಏರು ಗತಿಯಲ್ಲಿದ್ದು, ಸಕಾಲಿಕ ಚಿಕಿತ್ಸೆಗೆ ಯೋಜಿಸಲಾಗುತ್ತಿದೆ. ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಿಗೆ, ಸೂಕ್ತ ನಿರ್ದೇಶನ ನೀಡಲಾಗಿದೆ, ಎಂದಿದ್ದಾರೆ.  ರಾಜ್ಯದ ಎಲ್ಲ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ, ಎಲ್ಲ ಸಮಯದಲ್ಲೂ ಕಡ್ಡಾಯವಾಗಿ, ಆ್ಯಂಟಿ–ರೇಬೀಸ್ ಲಸಿಕೆ ಮತ್ತು ಇಮ್ಯುನೊ ಗ್ಲೋಬ್ಯುಲಿನ್ ದಾಸ್ತಾನು ಖಾತ್ರಿ ಪಡಿಸಲು ಸೂಚಿಸಲಾಗಿದೆ. ರೇಬೀಸ್‌ನ್ನು ರಾಜ್ಯದಲ್ಲಿ ಅಧಿಸೂಚಿತ ರೋಗವೆಂದು ಘೋಷಿಸಲಾಗಿದೆ. ನಾಯಿ ಅಥವಾ ಇತರ ಯಾವುದೇ ಪ್ರಾಣಿ ಕಡಿತದ ಪ್ರಕರಣಗಳು ವರದಿಯಾದಾಗ, ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುವುದು ಕಡ್ಡಾಯ ಎಂದು, ಸಚಿವ ದಿನೇಶ ಹೇಳಿದ್ದಾರೆ.

<><><>

ಬೆಂಗಳೂರಿನ, ಎಸ್.ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನ ಕೊಡಮಾಡುವ, 2025ನೇ ಸಾಲಿನ, ಪ್ರತಿಷ್ಠಿತ ವಿದ್ಯಾಶಂಕರ ಪುರಸ್ಕಾರಕ್ಕೆ, ಹಿರಿಯ ಭಾ ಾ ವಿಜ್ಞಾನಿ, ಪ್ರೊಫೆಸರ್ ಸಂಗಮೇಶ ಸವದತ್ತಿಮಠ ಭಾಜನರಾಗಿದ್ದಾರೆ. ಕನ್ನಡ ಸಾಹಿತ್ಯದ ಸ್ಮರಣೀಯ ಸೇವೆಗಾಗಿ, ಈ ಪುರಸ್ಕಾರವನ್ನು ನೀಡಲಾಗುತ್ತಿದ್ದು, 30 ಸಾವಿರ ರೂಪಾಯಿ ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ.  ನಾಳೆ, ಸಂಜೆ 4.30ಕ್ಕೆ, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ, ನಯನ ಸಭಾಂಗಣದಲ್ಲಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಉಪ ಕುಲಪತಿ ಡಿ.ವ್ಹಿ. ಪರಮಶಿವಮೂರ್ತಿ, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ವಿದ್ವಾಂಸ ಸಂಗಮೇಶ ಸವದತ್ತಿಮಠ, ವಚನಗಳ ಕುರಿತಾದ ತಮ್ಮ ಸಂಶೋಧನೆ ಬಗ್ಗೆ, ಮಾಹಿತಿ ಹಂಚಿಕೊಂಡಿದ್ದಾರೆ.

<><><>

ಪ್ರೊ. ಸಂಗಮೇಶ ಸವದತ್ತಿಮಠ ಧ್ವನಿ 40 ಸೆಕೆಂದುಗಳು

<><><>

ಶ್ರೀ ಸತ್ಯ ಸಾಯಿ ಸಂಸ್ಥೆಯ ಸೇವಾ ಕಾರ್ಯಗಳು, ಫಿಜಿ ದೇಶದ ಆರ್ಥಿಕತೆ ಮೇಲೆ, ಸಕಾರಾತ್ಮಕ ಬದಲಾವಣೆ ಬೀರಿವೆ ಎಂದು, ಫಿಜಿ ಅಧ್ಯಕ್ಷ, ರಾತು ನೈಕಮ ಲಾಲಬಲವು, ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಚಿಕ್ಕಬಳ್ಳಾಪುರ ತಾಲೂಕು, ಮುದ್ದೇನಹಳ್ಳಿಯ, ಶ್ರೀ ಸತ್ಯ ಸಾಯಿ ಗ್ರಾಮದಲ್ಲಿ ನಡೆಯುತ್ತಿರುವ, ‘ಒಂದು ಜಗತ್ತು, ಒಂದು ಕುಟುಂಬ; ಸಾಂಸ್ಕೃತಿಕ ಮಹೋತ್ಸವ’ದಲ್ಲಿ ಪಾಲ್ಗೊಂಡು, ಅವರು ಮಾತನಾಡಿದ.  ಉಚಿತ ವೈದ್ಯಕೀಯ ಸೇವೆಗಳು ಮತ್ತು ಆರೈಕೆ, ಜನರ ಆರೋಗ್ಯ ಮಟ್ಟವನ್ನು ಸುಧಾರಿಸಲು ಪೂರಕವಾಗಿವೆ ಎಂದರು.

<><><>

ಸದ್ಗುರು ಶ್ರೀ ಮಧುಸೂದನ ಸಾಯಿ ಸಾನಿಧ್ಯವಹಿಸಿ, ಇಂದಿನ ಜಗತ್ತಿನಲ್ಲಿ ಶಾಂತಿ, ಸಾಮರಸ್ಯ ಮತ್ತು ಸಹಬಾಳ್ವೆಯತ್ತ ಜಗತ್ತು ಗಮನ ಹರಿಸುವ ಅಗತ್ಯವಿದೆ. 100 ದೇಶಗಳನ್ನು ಒಗ್ಗೂಡಿಸಿ, ಒಂದಾಗಿ ಸಾಗಲು ಪ್ರಯತ್ನಿಸುತ್ತಿದ್ದೇವೆ ಎಂದರು.

<><><>

ದೇಶದ 562 ಸಂಸ್ಥಾನಗಳನ್ನು, ಭಾರತ ಗಣರಾಜ್ಯದಲ್ಲಿ ವಿಲೀನಗೊಳಿಸಿದ, ಉಕ್ಕಿನ ಮನು ್ಯ ಸರ್ದಾರ್ ವಲ್ಲಭ ಭಾಯಿ ಪಟೇಲ ಅವರ, 150ನೇ ಜಯಂತ್ಯುತ್ಸವದ ಹಿನ್ನೆಲೆ, ಚಿಕ್ಕಬಳ್ಳಾಪುರದಲ್ಲಿ ಇಂದು ಬೆಳಗ್ಗೆ 8 ಗಂಟೆಗೆ, ಏಕತಾ ಪಾದಯಾತ್ರೆ ಜರುಗಲಿದೆ. ಸಂಸದ ಕೆ. ಸುಧಾಕರ ನೇತೃತ್ವದಲ್ಲಿ, ಚಿಕ್ಕಬಳ್ಳಾಪುರದ, ಎ.ಪಿ.ಎಂ.ಸಿ. ಮಾರುಕಟ್ಟೆ ಮುಂಭಾಗ ದಿಂದ, ಏಕತಾ ನಡಿಗೆ ಆರಂಭಗೊಂಡು, ಎಸ್.ಜೆ.ಸಿ.ಐ.ಟಿ. ಮಹಾವಿದ್ಯಾಲಯದ ವರೆಗೆ ಸಾಗಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಕಲಬುರಗಿ ಜಿಲ್ಲೆಯ, ಮೂರು ಮಹತ್ವಾಕಾಂಕ್ಷಿ ತಾಲೂಕುಗಳಲ್ಲಿ, ಪರಿಣಾಮಕಾರಿ ಯೋಜನಾನುಷ್ಠಾನ; ಕೇಂದ್ರ ನೀತಿ ಆಯೋಗದಿಂದ, ಮೆಚ್ಚುಗೆ.
- ವಿಧಾನ ಮಂಡಲ ಚಳಿಗಾಲದ ಅಧಿವೇಶನ; ರಾಜ್ಯದ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಲು, ವಿಪಕ್ಷ ಬಿಜೆಪಿ ಸಿದ್ಧತೆ.
- ಕರಾವಳಿ ಗೋಡಂಬಿ ಉದ್ಯಮದ ಬಲವರ್ಧನೆಗೆ, ಹೊಸ ನೀತಿ; ಸರ್ಕಾರದೊಂದಿಗೆ ಚರ್ಚೆ, ವಿಧಾನಸಭಾಧ್ಯಕ್ಷರ, ಹೇಳಿಕೆ.
- 2030ರ ವೇಳೆಗೆ, ನಾಯಿ ಕಡಿತದ ಸಾವುಗಳನ್ನು ಶೂನ್ಯಕ್ಕೆ ತರಲು, ಆರೋಗ್ಯ ಇಲಾಖೆ, ಸಂಕಲ್ಪ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>